ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹ್ವಾಣ್

ಮೈಕ್ರೋ ಹೈಟೆಕ್ ಇಂಡಸ್ಟ್ರೀಸ್ -ವಿರುದ್ಧ-ಶ್ರೀ ಉತ್ತಮ್ ಗೌತಮ್ ಅಪ್ಲೈಯನ್ಸ್

ನಿಯತ ಮೊದಲ ಅಪೀಲುಸಂಖ್ಯೆ: 610/2017 (ಐಪಿಆರ್), ದಿನಾಂಕ 17 ನೇ ಜುಲೈ, 2017

ಆಜ್ಞೆ

ನ್ಯಾಯಮೂರ್ತಿ ರಾಘವೇಂದ್ರ ಎಸ್. ಚೌಹ್ವಾಣ್:

ಅಪೀಲುದಾರರಾದ ಮೈಕ್ರೋ ಹೈಟೆಕ್ ಇಂಡಸ್ಟ್ರೀಸ್ದಿನಾಂಕ: 31.01.2017 ರಂದು XVIII ನೇ ಹೆಚ್ಚುವರಿ ಸಿಟಿ ಸಿವಿಲ್ ನ್ಯಾಯಾಧೀಶರು ಬೆಂಗಳೂರು ನಗರ (ಸಿಸಿಹೆಚ್ -10) ಇವರು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯ ಕಾನೂನು ಸಮ್ಮತೆಯನ್ನು ಪ್ರಶ್ನಿಸಿ ಈ ದಾವೆಯನ್ನು ಹೂಡಿದ್ದಾರೆ.ಮಾನ್ಯ ನ್ಯಾಯಾಧೀಶರು ಪ್ರತ್ಯರ್ಜಿದಾರರಾದ ಮೆ || ಉತ್ತಮ್ ಗೌತಮ್ ಅಪ್ಲೈಯೆನ್ಸ್ ಇದರ ವಿರುದ್ಧ ಅಪೀಲುದಾರರು ಹೂಡಿದ ದಾವೆಯನ್ನು ವಜಾ ಮಾಡಿದ್ದರು.

2. ಮೊಕದ್ದಮೆಯ ಸಂಕ್ಷಿಪ್ತ ವಿವರ ಸಂಗತಿಗಳು ಇವೆ, 1993 ನೇ ವರ್ಷದಲ್ಲಿ ಅಪೀಲುದಾರ-ವಾದಿಯು ವರ್ಗ - 21 ರ (ಕುಕ್ಕರ್ ಮತ್ತು ಸಂಬಂಧಿಸಿದ ಸರಕುಗಳು) " ನಂದಿ " ಎಂಬ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಿರುವರು.ಸದರಿ ನೋಂದಣಿಯುದಿನಾಂಕ: 19.10.2017 ರ ವರೆಗೆ ಸಿಂಧುವಾಗಿರುತ್ತದೆ.ಮುಂದುವರೆದು,ದಿನಾಂಕ: 29.06.2009 ರಂದು ಅಪೀಲುದಾರರು ವರ್ಗ 21 ರಲ್ಲಿ " ನಂದಿ " ಎಂಬ ಗುರುತು ಚೀಟಿಯನ್ನು ಸಹ ನೊಂದಾಯಿಸಿರುತ್ತಾರೆ.ಅದರಂತೆ ಗುರುತು ಚೀಟಿಯು ನೋಂದಣಿಯಾಗಿರುತ್ತದೆ; ಗುರುತು ಚೀಟಿಯ ನೋಂದಣಿಯ ದಿನಾಂಕ 29.06.2019 ರ ವರೆಗೆ ಸಿಂಧುವಾಗಿರುತ್ತದೆ.ಅಲ್ಲದೆ, 26.12.2013 ರಂದು ಅಪೀಲುದಾರರುದಿನಾಂಕ: 26.12.2013 ರಂದು ಎಲ್.ಪಿ.ಜಿ.ಗ್ಯಾಸ್ ಸ್ಟವ್ಗಾಗಿ ವರ್ಗ 21 ರ ಅಡಿಯಲ್ಲಿ " ನಂದಿ " ಗುರುತನ್ನು ನೋಂದಾಯಿಸಿರುವರು.ಸದರಿ ನೋಂದಣಿಯು ದಿನಾಂಕ 23.11.2021 ರ ವರೆಗೆ ಸಿಂಧುವಾಗಿರುತ್ತದೆ.

3. ಅಪೀಲುದಾರರು 2014 ರಲ್ಲಿ ತುಂಬಾ ಆಶ್ಚರ್ಯಕರವಾಗಿ ಸಂಗತಿಯನ್ನು ಪತ್ತೆಹಚ್ಚಿರುತ್ತಾರೆ.ಅದೇನೆಂದರೆ, ಪ್ರತಿವಾದಿಗಳಾದ ಮೆ || ಉತ್ತಮ್ ಗೌತಮ್ ಅಪ್ಲೇಯೆನ್ಸ್ ಅವರು " ನಂದಿನಿ " ವ್ಯಾಪಾರ ಚಿಹ್ನೆಯ ಅಡಿಯಲ್ಲಿ ಪ್ರೆಶರ್ ಕುಕ್ಕರ್ ಮತ್ತು ಸಂಬಂಧಿಸಿದ ಸರಕುಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡು ಬಂದಿರುತ್ತದೆ.ದಿನಾಂಕ 17.03.2014 ರಂದು ಪ್ರತ್ಯರ್ಜಿದಾರರು ಸದರಿ ವ್ಯಾಪಾರ ಚಿಹ್ನೆಯನ್ನು ವರ್ಗ 21 ರಲ್ಲಿ ನೋಂದಾಯಿಸಿರುತ್ತಾರೆ.ಅಪೀಲುದಾರರಿಗೆದಿನಾಂಕ: 18.03.2015 ರಂದು ಪ್ರತ್ಯರ್ಜಿದಾರರು ಪ್ರೆಶರ್ ಕುಕ್ಕರ್ ಮತ್ತು ಸಂಬಂಧಿತ ಸರಕುಗಳನ್ನು ಮಾರಾಟ ಮಾಡಲು ಅಪೀಲುದಾರರು ಈಗಾಗಲೇ ಬಳಕೆ ಮಾಡುತ್ತಿರುವ ವ್ಯಾಪಾರ ಚಿಹ್ನೆಯನ್ನು ಸಾಕಷ್ಟು ಹೋಲುತ್ತಿರುವುದು ಕಂಡು ಬರುತ್ತದೆ.ಅಂದರೆ, ಅಪೀಲುದಾರರು ಬಳಕೆ ಮಾಡುತ್ತಿರುವ ವ್ಯಾಪಾರ ಚಿಹ್ನೆ " ನಂದಿ " ಯಾಗಿದೆ.ಪ್ರತ್ಯರ್ಜಿದಾರರು ವ್ಯಾಪಾರ ಚಿಹ್ನೆ ನಂದಿನಿ " ಯಾಗಿದೆ.

4. ಆದುದರಿಂದ,ದಿನಾಂಕ: 25.03.2015 ರಂದು ಅಪೀಲುದಾರರು ಮಾನ್ಯ ವಿಚಾರಣಾ ನ್ಯಾಯಾಲಯದ ಮುಂದೆ ಮೂ.ದಾ.ಸಂಖ್ಯೆ:2835/2015 ಸಿವಿಲ್ ದಾವೆಯನ್ನು ಹೂಡಿರುವರು.ಪ್ರಾರಂಭಿಕವಾಗಿದಿನಾಂಕ:

30.3.2015 ರಂದು ಮಾನ್ಯ ವಿಚಾರಣಾ ನ್ಯಾಯಾಧೀಶರು ಅಪೀಲುದಾರರ ಪರವಾಗಿ ಮಧ್ಯಕಾಲೀನ ಆದೇಶವನ್ನು ಜಾರಿ ಮಾಡಿರುತ್ತಾರೆ.ಆದರೆ,ದಿನಾಂಕ: 17.02.2016 ಮಾನ್ಯ ವಿಚಾರಣಾ ನ್ಯಾಯಾಧೀಶರು ಮಧ್ಯಕಾಲೀನ ಆದೇಶವನ್ನು ರದ್ದುಗೊಳಿಸಿ ಆದೇಶವನ್ನು ಹೊರಡಿಸಿರುತ್ತಾರೆ.

5. ವಿಚಾರಣೆಯ ಅವಧಿಯಲ್ಲಿ ಪಕ್ಷಕಾರರಿಬ್ಬರೂ ಮಂಡಿಸಿದ ವಾದವನ್ನು ಆಲಿಸಿ ಮತ್ತು ಹಾಜರುಪಡಿಸಿದ ಸಾಕ್ಷ್ಯವನ್ನು ಪರಿಶೀಲಿಸಿದ ತರುವಾಯ ಮಾನ್ಯ ನ್ಯಾಯಾಧೀಶರುದಿನಾಂಕ: 31.01.2017 ರಂದು ಅಪೀಲುದಾರರು ದಾಖಲಿಸಿದ ಸಿವಿಲ್ ದಾವೆಯನ್ನು ವಜಾ ಮಾಡಲಾಗಿದೆ ಎಂದು ತೀರ್ಪು ನೀಡಿರುವರು ಮತ್ತು ಡಿಗ್ರಿಯನ್ನು ಹೊರಡಿಸಿರುವರು.ಹಾಗಾಗಿ ಈ ಅಪೀಲು ಈ ನ್ಯಾಯಾಲಯದ ಮುಂದಿದೆ.

6. ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಹರ್ಷಿತ್ ತೂಲಿಯಾ ಅವರು ಈ ನ್ಯಾಯಾಲಯದ ಮುಂದೆ ಈ ಮುಂದಿನ ವಾದಾಂಶಗಳನ್ನು ಎತ್ತಿರುವರು:

ಮೊದಲನೆಯದಾಗಿ, ವ್ಯಾಪಾರ ಚಿಹ್ನೆಯನ್ನು ಉಲ್ಲಂಘನೆ ಮಾಡಿರುವ ಮೊಕದ್ದಮೆಯಾಗಿದ್ದು ಅಥವಾ ಸರಕನ್ನು ಮೋಸದಿಂದ ಮಾರಾಟ ಮಾಡಿದ ಮೊಕದ್ದಮೆಯಾಗಿದ್ದು, ಮಾನ್ಯ ವಿಚಾರಣಾ ನ್ಯಾಯಾಧೀಶರು ವ್ಯಾಪಾರ ಚಿಹ್ನೆಗಳಲ್ಲಿ 66 " ಸಮಗ್ರ ಹೋಲಿಕೆಯನ್ನು ಮತ್ತು ಇಲ್ಲದಿರುವ " ಭಿನ್ನತೆಗಳನ್ನು ಪರಿಗಣಿಸಬೇಕೆಂದು ನಿವೇದಿಸಿರುವರು.ಮಾನ್ಯ ನ್ಯಾಯವಾದಿಗಳು ವಾದವನ್ನು ಸಮರ್ಥಿಸಲು ಪಾರ್ಲೆ ಪ್ರಾಡಕ್ಟ್ (ಪ್ರೈ) ಅಮಿಟೆಡ್ -ವಿರುದ್ಧ-ಜೆ.ಪಿ.ಮತ್ತು ಕಂಪನಿ, ಮೈಸೂರು ಎಐಆರ್ 1972 ಎಸ್ಸಿ 1350 ಮತ್ತು ಟನ ಬಿಹಾರ ಟ್ಯೂಬ್ ಅಮಿಟೆಡ್ -ವಿರುದ್ಧ-ಗಾರ್ಗ್ ಇಸ್ಪ್ಯಾಟ್ ಅಮಿಟೆಡ್, 2009 (41) ಪಿಟಿಸಿ 741 (ದೆಹಲಿ) ಈ ಮೊಕದ್ದಮೆಗಳ ಆದೇಶವನ್ನು ಅವಲಂಬನೆಯಾಗಿ ಪರಾಮರ್ಶಿಸಲು ಉಲ್ಲೇಖಿಸಿರುವರು.ಆದುದರಿಂದ, ಮಾನ್ಯ ವಿಚಾರಣಾ ನ್ಯಾಯಾಧೀಶರು " ನಂದಿ " ಮತ್ತು " ನಂದಿನಿ " ಈ ಎರಡೂ ವ್ಯಾಪಾರ ಚಿಹ್ನೆಯ ನಡುವಿನ " ಸಮಗ್ರ ಹೋಲಿಕೆ ", ಇಲ್ಲದಿರುವ " ಭಿನ್ನತೆಗಳನ್ನು ಪರಿಶೀಲಿಸಬೇಕೆಂದು ಮತ್ತು ಚರ್ಚಿಸಬೇಕೆಂದು ನಿವೇದಿಸಿರುವರು.

ಎರಡನೇಯದಾಗಿ, ಎರಡೂ ವ್ಯಾಪಾರ ಚಿಹ್ನೆಗಳ ಉಚ್ಚರಣೆಯ ಧ್ವನಿಯು ಸಾಮ್ಯತೆಯಿಂದ ಕೂಡಿದೆ.ಆದುದರಿಂದ ಸಾಮಾನ್ಯ ಗ್ರಾಹಕರ ಮನಸ್ಸಿನಲ್ಲಿ ಈ ಧ್ವನಿ ಸಾಮ್ಯತೆಯೂ ಸಾಕಷ್ಟು ಗೊಂದಲಕ್ಕೆ ಕಾರಣವಾಗಿದೆ.

ಮೂರನೇಯದಾಗಿ, ಅಪೀಲುದಾರರ ಮತ್ತು ಪ್ರತ್ಯರ್ಜಿದಾರರ ಬಳಕೆ ಮಾಡುತ್ತಿರುವ ಎರಡು ಚಿತ್ರಗಳನ್ನು ಹೋಲಿಕೆ ಮಾಡಿದರೆ, ಅದು ಸಹ ಸಾಕಷ್ಟು ಅಂಶಗಳು ಸಾಮ್ಯತೆಯಿಂದ ಕೂಡಿರುವುದು ಕಂಡು ಬರುವುದರಿಂದ ಈ ಎಲ್ಲಾ ಸಾಮ್ಯತೆಗಳು ಗ್ರಾಹಕರು ಮೋಸಹೋಗುವಷ್ಟು ಗೊಂದಲಕ್ಕೆ ಕಾರಣವಾಗಿದೆ.ಕೊನೆಯದಾಗಿ, ವ್ಯಾಪಾರ ಚಿಹ್ನೆ ಕಾನೂನಿನ ಉದ್ದೇಶಗಳಲ್ಲಿ ಗ್ರಾಹಕರನ್ನು ಸಂರಕ್ಷಿಸುವುದಕ್ಕೆ ಇಂತಹ ಸಮಸ್ಯೆಯಿಂದ ಪಾರು ಮಾಡುವುದಕ್ಕೆ ಗುರುತುಗಳ ನಡುವಿನ " ಮೋಸ ಹೋಗುವಷ್ಟು ಸಾಮ್ಯತೆ " ಯ ಕಾರಣದಿಂದ ಗ್ರಾಹಕರು ಗೊಂದಲಕ್ಕೆ ಒಳಗಾಗುವುದರಿಂದ ಮಾನ್ಯ ನ್ಯಾಯಮೂರ್ತಿಗಳು ಈ ಸಂಬಂಧದಲ್ಲಿ ಸಾಕ್ಷ್ಯವನ್ನು ಕೂಲಂಕಷವಾಗಿ ವಿಚಾರಣೆ ಮಾಡಬೇಕಾಗುವ ಅಂಶವು ಈ ಕಾನೂನಿನ ಉದ್ದೇಶಗಳಲ್ಲಿ ಒಂದಾಗಿರುತ್ತದೆ.ಆದುದರಿಂದ, ಮಾನ್ಯ ನ್ಯಾಯಾಧೀಶರು ಕಾನೂನನ್ನು ಸರಿಯಾಗಿ

ಅನ್ವಯಿಸಿರುವುದಿಲ್ಲ.ಹಾಗಾಗಿ, ಅಪೀಲುದಾರರು ಮಾನ್ಯ ನ್ಯಾಯಾಧೀಶರು ತಪ್ಪಾಗಿ ವಜಾ ಮಾಡಿದ್ದುದರಿಂದ ಈ ಪ್ರಸ್ತುತ ದಾವೆಯನ್ನು ದಾಖಲಿಸಿರುವರು.

7. ಮತ್ತೊಂದು ಕಡೆಯಲ್ಲಿ, ಶ್ರೀ ಕೆ.ಎನ್. ರಕ್ಷಿತ್ ಅವರು ಪ್ರತ್ಯರ್ಜಿದಾರರ ಪರವಾಗಿ ಹಾಜರಾಗಿ ಮಂಡಿಸಿದ ಪ್ರತಿವಾದದ ಅಂಶಗಳು ಕೆಳಗಿನಂತಿದೆ:

ಮೊದಲನೆಯದಾಗಿ, ಅಪೀಲುದಾರರು ಬಳಸುತ್ತಿರುವ ವ್ಯಾಪಾರ ಚಿಹ್ನೆಗೆ ಸಾಮ್ಯತೆ ಹೊಂದಿರುವಂತಹ ವ್ಯಾಪಾರ ಚಿಹ್ನೆಯನ್ನು ಪ್ರತ್ಯರ್ಜಿದಾರರು ಬಳಕೆ ಮಾಡಿಕೊಳ್ಳುತ್ತಿರುವ ವಿಚಾರವು ಪ್ರತ್ಯರ್ಜಿದಾರರಿಗೆ ವಾಸ್ತವವಾಗಿ ತಿಳಿದ ಸಮಯದಲ್ಲಿ ಪ್ರತ್ಯರ್ಜಿದಾರರು ಅದನ್ನು ಗಂಭೀರವಾಗಿ ಪರಿಗಣಿಸಿ " ನಂದಿನಿ " ಎಂಬ ತಮ್ಮ ವ್ಯಾಪಾರ ಚಿಹ್ನೆಯ ಪದದ ಅಂತ್ಯದಲ್ಲಿ " ಡೈಮಂಡ್ " ಎಂಬ ಪದವನ್ನು ಸೇರಿಸಿರುತ್ತಾರೆ.ಹಾಗಾಗಿ " ನಂದಿ " ಮತ್ತು " ನಂದಿನಿ ಡೈಮಂಡ್ " ನಡುವಿನ ಧ್ವನಿ ವ್ಯತ್ಯಾಸಗಳು ಕಂಡುಬರುತ್ತದೆ.ಆದುದರಿಂದ ಗ್ರಾಹಕ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿಗೆ ಕಾರಣವಾಗುವುದಿಲ್ಲ.

ಎರಡನೇಯದಾಗಿ, " ನಂದಿ " ಮತ್ತು " ನಂದಿನಿ " ಪದಗಳ ಅರ್ಥಗಳಲ್ಲಿ ವ್ಯತ್ಯಾಸವನ್ನು ಪರಿಶೀಲಿಸೋಣ; ರೈತರು ನಂದಿಯ ಪದವನ್ನು ಎತ್ತುಗಳಿಗೆ ನಂದಿನಿ ಪದವನ್ನು ಹಸುವಿಗೆ ಬಳಕೆ ಮಾಡುತ್ತಾರೆ.ಗ್ರಾಹಕರು ಈ ಎರಡು ಪದಗಳ ನಡುವಿನ ಲಿಂಗ ವ್ಯತ್ಯಾಸದ ಬಗೆಗೆ ಸ್ಪಷ್ಟವಾದ ಅರಿವನ್ನು ಹೊಂದಿರುತ್ತಾರೆ.ಆದುದರಿಂದ, ಎರಡು ವ್ಯಾಪಾರ ಚಿಹ್ನೆಗಳು ಮೋಸ ಹೋಗುವಷ್ಟು ಸಾಮ್ಯತೆ ಹೊಂದಿರುವುದು ಎಂದು ಆಪಾದಿಸಿರುವುದು ಅಪೀಲುದಾರರ ಮನೋ ಭ್ರಮೆಯ ಕಲ್ಪನೆಯಾಗಿದೆಯೆಂದು ನಿವೇದಿಸಿದ್ದಾರೆ.

ಮೂರನೇಯದಾಗಿ, ಪ್ರತ್ಯರ್ಜಿದಾರರು ಬಳಸಿದ ಚಿತ್ರಗಳಲ್ಲಿಯೂ ಕೆಲವು ನಿರ್ದಿಷ್ಟ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ.ಪ್ರತ್ಯರ್ಜಿದಾರರು ಬಳಕೆ ಮಾಡಿದ ಚಿತ್ರಗಳ ಹಿನ್ನೆಲೆಯಲ್ಲಿಟ್ಟುಕೊಂಡು ನೋಡಿದಾಗ ಅವರು ಬಳಕೆ ಮಾಡಿದ ಚಿತ್ರಗಳು ಆಧುನಿಕ ಅಡುಗೆ ಮನೆಯ ಚಿತ್ರಗಳಾಗಿವೆ.ಆದರೆ ಅಪೀಲುದಾರರು ಬಳಕೆ ಮಾಡಿದ ಚಿತ್ರಗಳಲ್ಲಿ ಅಂಥ ಅಧುನಿಕ ಅಡುಗೆಮನೆಯ ಚಿತ್ರ ಇರುವುದಿಲ್ಲ.ಆದುದರಿಂದ ದೃಶ್ಯಕವಾಗಿಯೂ ವ್ಯಾಪಾರ ಚಿಹ್ನೆ ಮತ್ತು ಉತ್ಪನ್ನಗಳಲ್ಲಿ ಸಾಕಷ್ಟು ಹೇರಳ ವ್ಯತ್ಯಾಸಗಳು ಕಂಡು ಬರುತ್ತದೆ.ಹಾಗಾಗಿ, ಅಪೀಲುದಾರರು ಹೂಡಿದ ದಾವೆಯನ್ನು ಮಾನ್ಯ ನ್ಯಾಯಾಧೀಶರು ವಜಾ ಮಾಡಿರುವುದು ಸಮರ್ಥವಾಗಿದೆ.ಆದುದರಿಂದ ಮಾನ್ಯ ನ್ಯಾಯವಾದಿಗಳು ಪ್ರಶ್ನಿತ ಆದೇಶವನ್ನು ಸಮರ್ಥಿಸುವರು.

8. ಈ ನ್ಯಾಯಾಲಯವು ಈಗಾಗಲೇ ಸುಸ್ಥಾಪಿತವಾಗಿರುವ ಕಾನೂನು ತತ್ವಗಳನ್ನು ಅವಶ್ಯವಾಗಿ ಅನುಸರಿಸಬೇಕಾಗುತ್ತದೆ.ವ್ಯಾಪಾರ/ವ್ಯವಹಾರ ಜಗತ್ತು ಸುಗಮವಾಗಿ ಕಾರ್ಯ ನಿರ್ವಹಣೆಯಲ್ಲಿ ಗ್ರಾಹಕರ ಸಂರಕ್ಷಣೆಯೂ ಅತ್ಯವಶ್ಯಕವಾಗಿದೆ ಮತ್ತು ಈ ಬೃಹತ್ ಆಗಿರುವ ಸಮಾಜದಲ್ಲಿ ಸಾಮಾನ್ಯ ಕಾನೂನು ಸರಕನ್ನು ಮೋಸದಿಂದ ಮಾರಾಟ ಮಾಡುವುದನ್ನು ಪರಿಗಣಿಸಿದರೆ ಅದು ನಾಗರಿಕರಿಗೆ ಮಾಡಿದ ಮೋಸವಾಗುತ್ತದೆ.ಸರಕನ್ನು ಮೋಸದಿಂದ ಮಾರಾಟ ಮಾಡುವ 2) ಪರಿಕಲ್ಪನೆಯ ಅಡಿಯಲ್ಲಿ ಒಬ್ಬ ವ್ಯಕ್ತಿಯೂ ಮತ್ತೊಬ್ಬ ವ್ಯಕ್ತಿಯ ಮೂಲಕ ತಯಾರಿಸಿದ ಉತ್ಪನ್ನಗಳನ್ನು ತನ್ನ ಉತ್ಪನ್ನಗಳನ್ನು ಎಂಬಂತೆ ಸರಕನ್ನು ಮೋಸದಿಂದ ಮಾರಾಟ ಮಾಡುವುದಕ್ಕೆ ಅವಕಾಶ ನೀಡುವುದಿಲ್ಲ.ಅಧಿನಿಯಮಿತವಾಗಿರುವ ವ್ಯಾಪಾರ ಚಿಹ್ನೆ ಅಧಿನಿಯಮದಲ್ಲಿ ಅತಿಲಂಘನೆಯ ಪರಿಕಲ್ಪನೆಯನ್ನು ಪರಿಭಾಷಿಸಿದೆ.ಸರಕನ್ನು ಮೋಸದಿಂದ ಮಾರಾಟ ಮಾಡುವ ಮತ್ತು ಅತಿಲಂಘನೆ ಮಾಡಿರುವ ಈ ಎರಡನ್ನು ವ್ಯವಹರಿಸುವಾಗ

ನ್ಯಾಯಾಲಯ ಎರಡು ವ್ಯಾಪಾರ ಚಿಹ್ನೆಗಳ ನಡುವೆ " ಮೋಸ ಹೋಗವಷ್ಟು ಸಾಮ್ಯತೆ ಇರುವ " ಸಂಬಂಧದಲ್ಲಿ ಬಹಳ ಎಚ್ಚರಿಕೆಯಿಂದ ವ್ಯವಹರಣೆ ನಡೆಸಬೇಕಾಗಿದೆ.ಚಿತ್ರಗಳಲ್ಲಿನ ಸಾಮ್ಯತೆಯಷ್ಟೇ ಅಲ್ಲದೆ, ವ್ಯಾಪಾರ ಚಿಹ್ನೆಗಳಲ್ಲಿ ಬಳಕೆ ಮಾಡಿದ ಪದಗಳ ನಡುವಿನ ಧ್ವನಿ ಸಾಮ್ಯತೆಯಷ್ಟೇ ಅಲ್ಲದೆ, ಎರಡು ವ್ಯಾಪಾರ ಚಿಹ್ನೆಗಳ ನಡುವೆ " ಮೋಸಹೋಗುವಷ್ಟು ಸಾಮ್ಯತೆ ಇರುವ ಬಗ್ಗೆ ಮೂಲಭೂತವಾಗಿಯೂ ತುಲನಾತ್ಮಕವಾಗಿ ನೋಡಬೇಕಾಗಿದೆ.

9. ಆಶ್ಚರ್ಯಕರವಾಗಿ, ಮಾನ್ಯ ನ್ಯಾಯಾಧೀಶರು ಘನ ಸರ್ವೋಚ್ಚ ನ್ಯಾಯಾಲಯ ಪಾರ್ಲೆ ಪ್ರಾಡೆಕ್ಟ್ (ಮೇಲಿನ) ಮೊಕದ್ದಮೆಯ ಸಂದರ್ಭದಲ್ಲಿ ಉದ್ಘೋಷಿಸಿದ ಟನ ತತ್ವಗಳನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ.ಸದರಿ ತತ್ವವನ್ನು ಅನ್ವಯಿಸಿಕೊಳ್ಳುವುದನ್ನು ಮಾನ್ಯ ನ್ಯಾಯಾಧೀಶರು ಅನೂಕೂಲಕರವಾಗಿ ಮರೆತಿರುವುದು ಕಂಡು ಬರುತ್ತದೆ.ಹಾಗಾಗಿ, ಎರಡೂ ವ್ಯಾಪಾರ ಚಿಹ್ನೆಗಳ ನಡುವೆ ಇರುವ ಸಮಗ್ರ ಸಾಮ್ಯತೆಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗಿತ್ತು ವ್ಯಾಪಾರ ಚಿಹ್ನೆಗಳ ನಡುವಿನ ವ್ಯತ್ಯಾಸಗಳನ್ನು ಮಾನ್ಯ ನ್ಯಾಯಾಧೀಶರು ಚರ್ಚಿಸಬೇಕಾಗಿತ್ತು.ಆದುದರಿಂದ ಮಾನ್ಯ ನ್ಯಾಯಾಧೀಶರು ಮೊಕದ್ದಮೆಯನ್ನು ಪರಿಶೀಲಿಸಿ ನೀಡಿದ ನಿರ್ಣಯವು ಕಾನೂನಾತ್ಮಕವಾಗಿ ಅಸಮರ್ಥನೀಯವಾದುದಾಗಿದೆ.

10. ಮಾನ್ಯ ನ್ಯಾಯಾಧೀಶರ ಮುಂದೆ ಎತ್ತಲಾದ ಮೋಸಹೋಗುವಷ್ಟು ಹೋಲಿಕೆ ಇರುವ ಈ ಎರಡು ವ್ಯಾಪಾರ ಚಿಹ್ನೆಗಳು ಗ್ರಾಹಕ ಮನಸ್ಸಿನಲ್ಲಿ ಗೊಂದಲಕ್ಕೆ ಕಾರಣವಾಗಿರುವ ಪ್ರಶ್ನೆಯನ್ನು ಪರಿಗಣಿಸಿರುವರೇ ಅಥವಾ ಪರಿಗಣಿಸಿರುವುದಿಲ್ಲವೇ?ಎರಡನೇಯದಾಗಿ ಅಪೀಲುದಾರರ ವ್ಯಾಪಾರ ಚಿಹ್ನೆಯ ಸಾಮ್ಯತೆಗಳು ಅತಿಲಂಘನೆಗೆ ಕಾರಣವಾಗಿದೆಯೇ ಅಥವಾ ಕಾರಣವಾಗಿಲ್ಲವೇ?ಸದರಿ ಪ್ರಶ್ನೆತ ವಿವಾದಗಳನ್ನು ಉತ್ತರಿಸುವ ಸಲುವಾಗಿ, ಮಾನ್ಯ ನ್ಯಾಯಾಧೀಶರು ಎರಡು ವ್ಯಾಪಾರ ಚಿಹ್ನೆಗಳ ನಡುವಿನ ಸಾಮ್ಯತೆಗಳನ್ನು ಪರಿಶೀಲಿಸಬೇಕಿತ್ತು ಅಂತೇಯೇ ಅವುಗಳ ನಡುವಿನ ವ್ಯತ್ಯಾಸಗಳನ್ನು ಕೂಲಂಕುಷವಾಗಿ ಪರಿಶೀಲಿಸಬೇಕಾಗಿತ್ತು.

11. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಈ ವ್ಯಾಪಾರ ಚಿಹ್ನೆಗಳಲ್ಲಿನ ಗೊಂದಲ ಯಾವ ರೀತಿಯಲ್ಲಿ ಗ್ರಾಹಕರ ಮನಸ್ಸಿಗೆ ಆಗುವ ಪರಿಣಾಮಗಳ ವಿಷಯಕ್ಕೆ ಸಂಬಂಧಿಸಿದಂತೆ ಹೇರಳವಾದ ಅಧ್ಯಯನಗಳು ನಡೆದಿದೆ.ಅದರಲ್ಲೂ ನ್ಯಾಯಮೂರ್ತಿ ಫ್ಲೇಕ್ಸ್ ಫಂಕ್ಫಂಟರ್ ಅವರು ಮಿಷಾವಾಕ ರಬ್ಬರ್ ಮತ್ತು ಉಲನ್ ಮ್ಯಾನಿಫ್ಯಾಕ್ಚರ್ ಕಂಪನಿ -ವಿರುದ್ಧ-ಎಸ್.ಎಸ್.ಕ್ರೆಸ್ಜಿ.ಕಂಪನಿ ಮೊಕದ್ದಮೆಯಲ್ಲಿ ವ್ಯಕ್ತಪಡಿಸಿದ ಅಭಿವ್ಯಕ್ತಿಯು ಹೀಗಿದೆ- " ವ್ಯಾಪಾರ ಚಿಹ್ನೆ ಸಂರಕ್ಷಿತ ಸಂಕೇತಗಳು ಹೇಗೆ ಗ್ರಾಹಕರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೇ ಎ ಂ ಬ ಂ ದ ನ ಕಾನನಗಳು ಮಾನ್ಯ ಮಾಡ ಬೇಕು; ಶ್ರೀ ಜಾಕೋಬ್ ಜಾಕೋಬಿ ಅವರು ತಮ್ಮ ಲೇಖನವಾದ 66 " ವ್ಯಾಪಾರ ಚಿಹ್ನೆ ಕಾನೂನಿನಲ್ಲಿ ಮನೋವೈಜ್ಞಾನಿಕ ತಳಹದಿ " ಸಾಮಾನ್ಯ ಲೋಕೋಭಿಪ್ರಾಯ ಗೊಂದಲ, ಸಾರ ರಹಿತ, ದ್ವಿತೀಯಕ ಅರ್ಥಗಳು " ಇದರಲ್ಲಿ 66 ಬ್ರಾಂಡ್ ಹೆಸರು, ಸಕಾರಾತ್ಮಕ ' ಮಾಹಿತಿಯಂತೆ ಕಾರ್ಯ ನಿರ್ವಹಿಸುತ್ತವೆ ".ಬ್ರಾಂಡ್ ಹೆಸರುಗಳು ಸಂಬಂಧಿಸಿದ ಮತ್ತು ವ್ಯವಸ್ಥಿತವಾದ ಮಾಹಿತಿಯನ್ನು ಆ ಯಾವುದೇ ಇತರ ಸಹವರ್ತಿ ವಿಷಯಗಳನ್ನು ನೆನಪು ಮಾಡಿಕೊಳ್ಳುವ ಮೂಲ ಉದ್ದೇಶವನ್ನು ಅವುಗಳು ಪ್ರತಿನಿಧಿಸುತ್ತದೆ " ಎಂದು ಪ್ರತಿಪಾದಿಸಿರುವರು.ಸುರಪರಿಚಿತ ಬ್ರಾಂಡ್ ಹೆಸರು ಸಮೂಹದ ಸುಸಂಗತ ಮತ್ತು ಪ್ರಮುಖ ಮಾಹಿತಿಯನ್ನು ಪ್ರಜ್ಞಾ ಪೂರ್ವಕವಾಗಿ ಸಮರ್ಥವಾಗಿದೆ ಎಂದು ತಿಳಿಯಬಹುದಾಗಿದೆ.ಬ್ರಾಂಡ್ ಹೆಸರು " ಸಕಾರಾತ್ಮಕ ಮಾಹಿತಿ " ಯಂತೆ ಗ್ರಾಹಕರ ನೆನಪಿನಿಂದ ವ್ಯವಸ್ಥಿತವಾಗಿ, ಸಂಗ್ರಹವಾಗಿರುವ ಮತ್ತು ಪುನಃ

ಗಳಿಕೆಯ ಮಾಹಿತಿಯನ್ನು ಸಮರ್ಥವಾಗಿ ತಲುಪಿಸಿರುತ್ತವೆ.ವಾಸ್ತವವಾಗಿ, ಗ್ರಾಹಕರು ಖರೀದಿ ಮಾಡುವ ಪೂರ್ವದಲ್ಲಿಯೇ ತಮ್ಮ ನಿರ್ಧಾರ ಮಾಡುವಿಕೆಯಲ್ಲಿ ತೊಡಗಿದಾಗ, ಬ್ರಾಂಡ್ ಹೆಸರಿನ ಮಾಹಿತಿಯು ಬಹಳಷ್ಟು ರೀತಿಯ ಮಾಹಿತಿಯನ್ನು ಹೊರ ಹಾಕುತ್ತ ಹೋಗುತ್ತದೆ.ಗ್ರಾಹಕರ ಅಭಿವ್ಯಕ್ತಿಗೆ ಬ್ರಾಂಡ್ ಹೆಸರು ಹೇಗೆ ಸಮರ್ಥವಾಗಿದೆ ಎಂಬ ಮಾಹಿತಿಯನ್ನು ಗ್ರಾಹಕರಿಗೆ ಮನವರಿಕೆ ಮಾಡಿಕೊಡುತ್ತದೆ.ಗ್ರಾಹಕರಿಗೆ ಅನುಸಾರವಾಗಿ, ಬಂದಂತಹ ಮಾಹಿತಿಯನ್ನು ಈಗಾಗಲೇ ಅವರು ಪಡೆದುಕೊಂಡ ತಿಳುವಳಿಕೆ ಎಂದು ಅರ್ಥೈಸಲಾಗಿದೆ.ಅಲ್ಲದೆ ನೆನಪಿನಲ್ಲಿ ಪುನಃ ಪುನಃ ಸಂಗ್ರಹವಾದ ಮಾಹಿತಿಯ ಕಾರ್ಯವಿಧಾನವನ್ನು ಉದ್ದೇಶಪೂರ್ವಕ ಎಚ್ಚರಿಕೆಯೊಂದಿಗೆ ಮಾಡದಿರುವ ಹೊಸದಾದ ಪ್ರೋತ್ಸಾಹವೆಂದು ಪರಿಭಾಷಿಸಲಾಗಿದೆ.ಆದರೆ ಬಂದಂತಹ ಮಾಹಿತಿ ಸಾಮಾನ್ಯವಾಗಿ ಮೊದಲ ಇನ್ನೂರು ಮಿಲಿ ಸೆಕೆಂಡ್ಗಳೊಳಗೆ ಅಪ್ರಜ್ಞಾಪೂರ್ವಕವಾಗಿ ಮತ್ತು ತತ್ಕಣದ ವಾಸ್ತವವಾಗಿ, ನಂತರದಲ್ಲಿ ಸಂಶಯಾಸ್ಪದವಾಗಿರುತ್ತದೆ.ಲೇಖಕರು ಅಂತ್ಯದಲ್ಲಿ ಹೀಗೆ ನಿರೂಪಿಸಿರುವರು " ಒಟ್ಟಾರೆಯಾಗಿ, ನಾವು ಈಗಾಗಲೇ ಬಳಸುತ್ತಿರುವ ಯಾವುವೇ ವಸ್ತುವನ್ನು ಬಳಸುವ ಮೊದಲು ವಸ್ತುವಿನ ಪ್ರತಿಯೊಂದು (ಅಂದರೆ ಉತ್ಪನ್ನ, ಜಾಹೀರಾತು ಅಥವಾ ದಾಸ್ತಾನು) ಪ್ರತ್ಯೇಕ ದೃಷ್ಟಿಕೋನದಿಂದ ಅದನ್ನು ಪರಿಶೀಲಿಸುವ ಅಗತ್ಯ ಇರುವುದಿಲ್ಲ.ಆ ವಸ್ತುಗಳ ಪ್ರಮುಖಾಂಶಗಳು ನಮ್ಮ ನೆನಪಿನಲ್ಲಿ ಅಷ್ಟೊತ್ತಿರುತ್ತದೆ ಎಂದು ಅರ್ಥೈಸಬಹುದಾಗಿದೆ.ಬದಲಾಗಿ, ಇದುವರೆವಿಗೂ ನಾವು ಬಳಸದಿರುವ ವಸ್ತುಗಳನ್ನು ಅರ್ಥೈಸುವಾಗ ನಾವು ಸಾಮಾನ್ಯವಾಗಿ ಮಾನ್ಯತೆಯ ವಿಧಾನ " ಎಂದು ಕರೆಯಲಾಗುವ ಕಾರ್ಯ ವಿಧಾನವನ್ನು ಅವಲಂಬನೆಯಾಗಿ ತೆಗೆದುಕೊಳ್ಳಬೇಕಾಗುತ್ತದೆ.ಬಂದಂತಹ ಮಾಹಿತಿಯಲ್ಲಿ ಪ್ರತಿನಿಧಿತವಾದ ಗುಣಲಕ್ಷಣಗಳು ಸಾಕಷ್ಟು ಸಂಖ್ಯೆಯಲ್ಲಿರುವಾಗ ಈಗಾಗಲೇ ಅಸ್ತಿತ್ವದಲ್ಲಿರುವ ಜಾಲತಾಣದಲ್ಲಿನ ಅರಿವಿನ ಗುಣಲಕ್ಷಣದ ವಿಧಾನವನ್ನು ಬಂದಂತಹ ಮಾಹಿತಿಯೊಂದಿಗೆ ಹೋಲಿಕೆ ಮಾಡಬೇಕಾಗುತ್ತದೆ.ಆ ಜಾಲ ತಾಣದಲ್ಲಿ ವಿಶ್ಲೇಷಿಸಲಾದ ವಿವರಗಳನ್ನು ಮನವರಿಕೆ ಮಾಡಿಕೊಳ್ಳುವುದು ಮತ್ತು ಅ ಅಂತಹ ಒಂದು ವಸ್ತುವನ್ನು ಮಾದರಿಯಂತೆ ಅರ್ಥೈಸುವುದು ವಸ್ತುವಿನ ಹೊರ ಭಾಗದಲ್ಲಿ ಉದ್ಧರಿಸಲಾದ ಮಾಹಿತಿ ಮತ್ತು ಜಾಲ ತಾಣದಲ್ಲಿ ಆ ವಸ್ತುವಿನ ಬಗ್ಗೆ ಸಂಗ್ರಹಿತವಾದ ಮಾಹಿತಿಯ ವಿಧಾನದ ನಡುವೆ ಹೆಚ್ಚಿನ ಸಾದೃಶ್ಯತೆಯು ಹೆಚ್ಚಿನ ಹೋಲಿಕೆಯು ಇತ್ತೀಚೆಗೆ ಮಾತ್ರವೇ ಗೊಂದಲಕ್ಕೆ ಕಾರಣವಾಗಿರುತ್ತವೆ.(ವ್ಯಾಪಾರ ಚಿಹ್ನೆ ವರದಿಗಾರ, ಸಂಖ್ಯೆ .91 ನಂ .5, ಸೆಪ್ಟೆಂಬರ್-ಅಕ್ಟೋಬರ್ 2000)

ನ್ಯಾಯಾಲಯಗಳು ವ್ಯಾಪಾರ ಚಿಹ್ನೆ ಅತಿಲಂಘನೆ ಮತ್ತು/ಅಥವಾ ಸರಕನ್ನು ಮೋಸದಿಂದ ಮಾರಾಟ ಮಾಡಿ ಮೊಕದ್ದಮೆಗಳನ್ನು ವ್ಯವಹರಿಸುವಾಗ ಈ ವೈಜ್ಞಾನಿಕ ದತ್ತಾಂಶಗಳನ್ನೆಲ್ಲವನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

12. " ನಂದಿ " ಮತ್ತು " ನಂದಿನಿ " ಪದಗಳೆರಡರ ಧ್ವನಿಸಾಮ್ಯತೆಯಲ್ಲಿರುವ ಸಾಮ್ಯತೆಯನ್ನು ಪರಿಗಣಿಸಬೇಕಾಗುತ್ತದೆ.ಈ ಎರಡು ಪದಗಳ ನಡುವಿನ ಭಾಷಿಕ ವಿಭಿನ್ನತೆಯೂ ಸಾಕಷ್ಟು ಪ್ರಮಾಣದ ಗ್ರಾಹಕರಿಗೆ ಸರಿಯಾಗಿ ತಿಳಿದಿರುವುದಿಲ್ಲ.ಗ್ರಾಹಕರಿಗೆ " ನಂದಿನಿ " ಪದದಲ್ಲಿಯೇ " ನಂದಿ " ಎಂಬ ಪದವು ಒಳಗೊಂಡಿದೆ ಎಂಬುದೇ ತಿಳಿದಿರುವುದಿಲ್ಲ.ಹಾಗೂ ಅದರ ಅರಿವು ಅವರಿಗೆ ಇರುವುದಿಲ್ಲ.ಆದುದರಿಂದ ಧ್ವನಿ ಸಾಮ್ಯತೆ ಇರುವ ಈ ಪದಗಳಲ್ಲಿ ಸಾಮ್ಯತೆಯೂ ಮುಗ್ಧ ಗ್ರಾಹಕರನ್ನು ಗೊಂದಲಕ್ಕೆ ಇಡು ಮಾಡುತ್ತದೆ.

13. ಅಷ್ಟೇ ಅಲ್ಲದೆ, ಎರಡು ಕಂಪನಿಗಳು ಅಳವಡಿಸಿಕೊಂಡ ಚಿತ್ರಗಳು ಸಾಮ್ಯತೆಯಿಂದ ಕೂಡಿದೆ.ಅಪೀಲುದಾರರು ಬಳಸಿದ ಚಿತ್ರದಲ್ಲಿ ಕೇಂದ್ರ ಭಾಗದಲ್ಲಿ ಪ್ರೋಶರ್ ಕುಕ್ಕರ್ನ ಚಿತ್ರವಿದೆ ಅದರ ಮುಂದೆ ವಿವಿಧ ತರಕಾರಿಗಳ ಚಿತ್ರಗಳು ಇದೆ. ಪ್ರತ್ಯರ್ಜಿದಾರರು ಬಳಕೆ ಮಾಡಿರುವ ಚಿತ್ರದಲ್ಲೂ ಈ ಸಾಮ್ಯತೆಯಿಂದಲೇ ಕೂಡಿದೆ ಅಂದರೆ, ಕೇಂದ್ರ ಭಾಗದಲ್ಲಿ ಫೇಶರ ಕುಕ್ಕರ್ ಇದ್ದು ಅದರ ಮುಂದೆ ವಿವಿಧ ತರಕಾರಿಗಳ ಚಿತ್ರವಿದೆ.ಅಲ್ಲದೆ ಪ್ರತ್ಯರ್ಜಿದಾರರ ಮಾನ್ಯ ನ್ಯಾಯವಾದಿಗಳು ಚಿತ್ರದಲ್ಲಿನ ತರಕಾರಿಗಳು ಬೇರೆ ಬೇರೆಯಾಗಿವೆ.ಇದರಿಂದ ಗ್ರಾಹಕರಿಗೆ ಯಾವುದೇ ಗೊಂದಲ ಉಂಟಾಗುವುದಿಲ್ಲ ಎಂದು ವಾದ ಮಂಡಿಸಿರುವರು.ಆದರೆ ಗ್ರಾಹಕರು ಮಾರುಕಟ್ಟೆಗೆ ಇಂತಹ ನೂನ್ಯತೆಯನ್ನು ಗುರುತಿಸಲು ಶೆರಾಲಾಕ್ ಹೋಮ್ಸ್ ನ ರೀತಿಯಲ್ಲಿ ನೋಡಲು ಹೋಗುವುದಿಲ್ಲ.ತತ್ಕಣದಲ್ಲಿ ಮಾನ್ಯತೆಗೊಂಡ ಎರಡೂ ವ್ಯಾಪಾರ ಚಿಹ್ನೆಯಲ್ಲಿ ಗ್ರಾಹಕರು ಆ ಚಿತ್ರಗಳಲ್ಲಿ ಬಳಸಿರುವ ತರಕಾರಿಯಲ್ಲಿ ಬೇರೆ ಬೇರೆಯಾಗಿದೆ ಎಂದು ವಿಶ್ಲೇಷಣೆ ಮಾಡುತ್ತಾರೆ ಎಂದು ನಿರೀಕ್ಷಿಸುವುದು ತಪ್ಪಾಗಿರುತ್ತದೆ.ಗ್ರಾಹಕರ ದೃಷ್ಟಿಯಲ್ಲಿ ಅಪೀಲುದಾರರು ತಯಾರಿಸಿದ ಉತ್ಪನ್ನವು ಆದು ಫ್ರೆಶರ್ ಕುಕ್ಕರ್ನ ಮುಂದೆ ವಿವಿಧ ಬಣ್ಣಗಳ ಕೆಲವು ತರಕಾರಿಗಳಿರುವ ಚಿತ್ರವಾಗಿದೆ ಎಂಬ ಅಭಿಪ್ರಾಯವನ್ನು ಹೊಂದಿರುತ್ತಾರೆ.ಆದುದರಿಂದ ಪ್ರತ್ಯರ್ಜಿದಾರರ ಚಿತ್ರದಲ್ಲೂ ಫ್ರೆಶರ್ ಕುಕ್ಕರ್ ಮತ್ತು ತರಕಾರಿಗಳ ಚಿತ್ರವಿರುವುದರಿಂದ ಅಪೀಲುದಾರರ ಚಿತ್ರದ ಸಾಮ್ಯತೆಯನ್ನೇ ಅದು ಹೊಂದಿರುವುದರಿಂದ ಅಪೀಲುದಾರರ ಉತ್ಪನ್ನಗಳ ಪರವಾಗಿ ಪ್ರತ್ಯರ್ಜಿದಾರರ ಉತ್ಪನ್ನಗಳನ್ನು ಇಷ್ಟಪಡುವ ಗೊಂದಲಕ್ಕೆ ಗ್ರಾಹಕರು ಈಡಾಗುವುದು ಸುಸ್ಪಷ್ಟವಾಗಿರುತ್ತವೆ.

14. ಅಪೀಲುದಾರರು ಬಳಕೆ ಮಾಡಿದ ಇತರ ಚಿತ್ರಗಳನ್ನು ಸಹ ಪ್ರತ್ಯರ್ಜಿದಾರರ ನಕಲು ಮಾಡಿರುತ್ತಾರೆ.ಅವುಗಳು ಹೀಗಿದೆ, ಅಪೀಲುದಾರರು " 5 ವರ್ಷಗಳ ವಾರೆಂಟಿ " ಎಂಬ ಪದಗಳೊಂದಿಗೆ ಹಾಕಿದ ಚಿತ್ರವನ್ನು ಪ್ರತ್ಯರ್ಜಿದಾರರು ಬಳಕೆ ಮಾಡಿಕೊಂಡು " 7 ವರ್ಷಗಳ ವಾರೆಂಟಿ " ಎಂಬ ಪದಗಳನ್ನು ಹಾಕಿರುತ್ತಾರೆ.ವಾಸ್ತವವಾಗಿ " 5 ವರ್ಷಗಳ ವಾರೆಂಟಿ'ಯ ಬದಲಾಗಿ " 7 ವರ್ಷಗಳ ವಾರೆಂಟಿ " ಎಂಬ ಪದವನ್ನು ಮಾತ್ರವೇ ಮಾರ್ಪಾಡು ಮಾಡಿರುವುದು ಕಂಡು ಬರುತ್ತದೆ.ಆದುದರಿಂದ ಎರಡೂ ವ್ಯಾಪಾರ ಚಿಹ್ನೆಗಳ ನಡುವಿನ ಹೋಲಿಕೆಯೂ ಅಸ್ವಾಭಾವಿಕವಾಗಿದೆ.

15. " ನಂದಿ " ಮತ್ತು " ನಂದಿನಿ " ಪದಗಳಲ್ಲು ಧ್ವನಿ ಸಾಮ್ಯತೆ ಇರುವುದರಿಂದ 66 " ಡೈಮಂಡ್ " ಪದವನ್ನು ಬಳಕೆ ಮಾಡಿದ ಪಕ್ಷದಲ್ಲಿ ಅದು ಗ್ರಾಹಕರಿಗೆ ಮತ್ತಷ್ಟು ಗೊಂದಲಕ್ಕೆ ಕಾರಣವಾಗುತ್ತದೆ.ಹೇಗೆಂದರೆ ಗ್ರಾಹಕರು 66 " ಡೈಮಂಡ್ ' ಪದದಲ್ಲಿ ಉತ್ಪನ್ನದ ಗುಣಮಟ್ಟವನ್ನು ಪ್ರತಿ ಬಂಧಿಸಲಾಗಿದೆ ಎಂಬ ನಂಬಿಕೆಯನ್ನು ಹೊಂದಿರುತ್ತಾರೆ ಮತ್ತು ಈ ಪದದಿಂದ ಪ್ರತ್ಯರ್ಜಿದಾರರು ಮಾರುಕಟ್ಟೆಯಲ್ಲಿ ಹೊಸ ಉತ್ಪನ್ನವೆಂದು ಉಲ್ಲೇಖಿಸುವ ಅಗತ್ಯ ಕಂಡು ಬರುವುದಿಲ್ಲ.

16. ಅಲ್ಲದೆ, ಪ್ರತ್ಯರ್ಜಿದಾರರು ಆಧುನಿಕ ಅಡುಗೆ ನಮೂನೆಯ ಚಿತ್ರವನ್ನು ಬಳಕೆ ಮಾಡಿದ್ದರೆ, ಅದು ಗ್ರಾಹಕರಿಗೆ ವ್ಯಾಪಾರ ಚಿಹ್ನೆ ಮತ್ತು ಉತ್ಪನ್ನಗಳ ನಿರ್ದಿಷ್ಟ ಚಿಹ್ನೆಯಾಗಿ ಸಹಾಯಕ್ಕೆ ಬರುತ್ತದೆ.ಮೇಲೆ ಉದ್ಘೋಷಿಸಿದಂತೆ, ಗ್ರಾಹಕರು ಮಾನಸಿಕವಾಗಿ ಮಾನ್ಯತೆಯ ವಿಧಾನ " ವನ್ನೇ ಅವಲಂಬಿಸಿರುತ್ತಾರೆ ಮತ್ತು " ಬಂದಂತಹ ಮಾಹಿತಿ ಎರಡುನೂರು ಮಿಲಿ ಸೆಕೆಂಡ್ಗಳ ತರುವಾಯ ಹಿಂದಿನ ನೆನಪಿನೊಳಗಿನ ಮಾಹಿತಿಯೂ ಸಂಶಯಾಸ್ಪದವಾಗಿ ಪುನಃ ಪುನಃ ತಿಳಿದುಕೊಳ್ಳಬೇಕಾಗುವುದರಿಂದ, ಗ್ರಾಹಕರ ಮತ್ತಷ್ಟು ಗೊಂದಲಕ್ಕೆ ಈಡಾಗುವ ಸಾಧ್ಯತೆ ಹೆಚ್ಚಾಗಿದೆ.

17. ವಾಸ್ತವವಾಗಿ ಎರಡು ಉತ್ಪನ್ನಗಳಲ್ಲಿನ ಎಲ್ಲ ಸಾಮ್ಯತೆಗಳು ಮತ್ತು ದೃಶ್ಯಕ ಸಾಮ್ಯತೆಗಳೆಲ್ಲವೂ ಸಾಮ್ಯತೆಯಿಂದ ಕೂಡಿದೆ.ಆದುದರಿಂದ, ಪ್ರತ್ಯರ್ಜಿದಾರರು ತಮ್ಮ ಉತ್ಪನ್ನಗಳನ್ನು ಅಪೀಲುದಾರರ ಉತ್ಪನ್ನಗಳು ಎಂಬಂತೆ ಮೋಸದಿಂದ ಮಾರಾಟ ಮಾಡುವ ಸಾಧ್ಯತೆಯೂ ಕಂಡು ಬರುತ್ತದೆ.ಅಪೀಲುದಾರರು ಪ್ರತ್ಯರ್ಜಿದಾರರಿಗಿಂತಲೂ ಮುಂಚಿತವಾಗಿ ಮಾರುಕಟ್ಟೆಯನ್ನು ಪ್ರವೇಶಿಸಿದ್ದಾರೆ ಹಾಗೂ ಅಪೀಲುದಾರರು ತಮ್ಮ ಉತ್ಪನ್ನಗಳಿಂದ ಮಾರುಕಟ್ಟೆಯಲ್ಲಿ ತಮ್ಮದೇ ಪ್ರಖ್ಯಾತಿಯನ್ನು ಸೃಜಸಿಕೊಂಡಿರುವುದನ್ನು ಕಾಣಬಹುದು.ಅಪೀಲುದಾರರು ಪ್ರತ್ಯರ್ಜಿದಾರರು ಮಾಡಿರುವ ಅತಿಲ್ಲಂಘನೆ ಮತ್ತು ಸರಕನ್ನು ಮೋಸದಿಂದ ಮಾರಾಟ ಮಾಡುವ ಮೊಕದ್ದಮೆಗಳನ್ನು ಸಮರ್ಥವಾಗಿ ರುಜುವಾತುಪಡಿಸಿರುವುದನ್ನು ಅಂಗೀಕರಿಸಲಾಗಿದೆ.

18. ಮೇಲೆ ಉಲ್ಲೇಖಿಸಲಾದ ಕಾರಣಗಳಿಗಾಗಿ, ಈ ಮೂಲಕ ಅಪೀಲನ್ನು ಪುರಸ್ಕರಿಸಲಾಗಿದೆ.ದಿನಾಂಕ 31.01.2017 ರ ಪ್ರಶ್ನಿತ ಆದೇಶವನ್ನು ವಜಾ ಮಾಡಲಾಗಿದೆ.ಪ್ರತ್ಯರ್ಜಿದಾರರ ವ್ಯಾಪಾರ ಚಿಹ್ನೆಯಾದ " ನಂದಿನಿ " ಮತ್ತು/ಅಥವಾ ಗುರುತು ಚಿಹ್ನೆ " ನಂದಿನಿ " ಮತ್ತು/ಅಥವಾ ಅಪೀಲುದಾರರು ನೋಂದಾಯಿಸಿರುವ " ನಂದಿ " ಮತ್ತು/ಅಥವಾ " ನಂದಿ " ಗುರುತು ಚಿಹ್ನೆಗೆ ತದ್ರೂಪವಾದ ಮತ್ತು ಅಥವಾ ಮೋಸಹೋಗುವಷ್ಟು ಸಾಮ್ಯತೆ ಇರುವ ಆ ಯಾವುದೇ ಇತರ ವ್ಯಾಪಾರ ಚಿಹ್ನೆಯ ಅಡಿಯಲ್ಲಿ ಮತ್ತು/ಅಥವಾ ಅಪೀಲುದಾರರು ನೋಂದಾಯಿಸಿದ ವ್ಯಾಪಾರ ಚಿಹ್ನೆ " ನಂದಿ " ಮತ್ತು ಗುರುತು ಚಿಹ್ನೆ " ನಂದಿ " ಯನ್ನು ಅತಿಲಂಘನೆ ಮಾಡಿ ಎಸಗಿದ ಕೃತ್ಯದಿಂದ ಪ್ರಶ್ನಿತ ಸರಕುಗಳು ಎಂದರೆ ಪ್ರೆಶರ್ ಕುಕ್ಕರ್ ಅನ್ನು ತಯಾರಿಸುವ ಮತ್ತು ಮಾರಾಟ ಮಾಡುವುದಕ್ಕೆ ಪ್ರತ್ಯರ್ಜಿದಾರರನ್ನು ಪ್ರತಿಬಂಧಿಸಲಾಗಿದೆ.

ಮೇಲೆ ನಮೂದಿಸಲಾದ ನಿಬಂಧನೆಗಳಿಗನುಸಾರವಾಗಿ ಡಿಕ್ರಿಯನ್ನು ಸಿದ್ಧಪಡಿಸತಕ್ಕದ್ದು.